ಇದು ಚರ್ಚೆ ಮಾಡುವುದಕ್ಕೆ ಪ್ರಮುಖವಾದ ವಿಚಾರವೆಂದು ಹೇಳಿ. ನೀವು ಕರೆದಾಗ ದಯಮಾಡಿ Monday ತೆಗೆದುಕೊಳ್ಳಿ ಎಂದು ನಾನು ವಿನಂತಿಸಿಕೊಂಡೆ. ನೀವು ಅವೊತ್ತೇ ನನ್ನನ್ನು ಕರೆದಿರಿ. ಆಗ ನೀವು ಯಾರೂ ಇಲ್ಲವೆಂದು, ನಿಮಗೆ ಗೌರವ ಕೊಟ್ಟು, ನೀವು ಇಲ್ಲದೆ ಚರ್ಚೆ ಮಾಡಿದರೆ, ಅದಕ್ಕೇನೂ ಅರ್ಥವಿರುವುದಿಲ್ಲವೆಂದು ಹೇಳಿದ್ದೇನೆ.

ಅಧ್ಯಕ್ಷರು : ದೇಶಪಾಂಡೆಯವರು ಅವಸರವಾಗಿ ಊರಿಗೆ ಹೋಗಬೇಕಾಗಿತ್ತು. ಆದುದರಿಂದ.....

ಶ್ರೀ ಸಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರವಾದ ನರಗುಂದದಲ್ಲಿ ಜುಲೈ ತಿಂಗಳಿನಲ್ಲಿ ಸಾಕಷ್ಟು ಮಳೆಯಾಗಿ ಮುಂಗಾರು ಬಿತ್ತನೆಯಾಗಿದೆ. ಆದರೆ.....

ಅಧ್ಯಕ್ಷರು : ಈಗ ನೀವು ಏನು ಹೇಳುತ್ತಿದ್ದೀರಿ? Zero Hour ಗೆ ತಾವು ಈಗ ಕಳುಹಿಸಿಕೊಟ್ಟಿದ್ದೀರಿ. ತಾವು ನಮ್ಮ ಕೊಠಡಿಗೆ ಬಂದು ಕೊಟ್ಟಿದ್ದರೆ, ಈಗ ಬರುತ್ತಿತ್ತು. ಆದರೆ, ತಾವು ಈಗ ಕಳುಹಿಸಿಕೊಟ್ಟಿರುವುದರಿಂದ ಅದನ್ನು ನಾಳೆ ತೆಗೆದುಕೊಳ್ಳುತ್ತೇನೆ.

ಈಗ ಸದನವನ್ನು ಪುನಃ ಮಧ್ಯಾಹ್ನ 2.45 ಗಂಟೆಗೆ ಸೇರುವಂತೆ ಮುಂದೂಡುತ್ತಿದ್ದೇನೆ.

(ಭೋಜನ ವಿರಾಮಕ್ಕೆಂದು ಸದನವು ಮಧ್ಯಾಹ್ನ 2.42 ಗಂಟೆಗೆ ಮುಂದೂಡಲ್ಪಟ್ಟು ಪುನಃ 2.45 ಗಂಟೆಗೆ ಸೇರಲು ತೀರ್ಮಾನಿಸಲಾಯಿತು)

(ಸದನವು ಮಧ್ಯಾಹ್ನ 3.06ಕ್ಕೆ ಸಮಾವೇಶಗೊಂಡಿತು. ಸಭಾಧ್ಯಕ್ಷರು (ಶ್ರೀ ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

5. ಗೈರು ಹಾಜರಿಗೆ ಅನುಮತಿ

ಅಧ್ಯಕ್ಷರು : ಶ್ರೀ ಎನ್. ಸೂರ್ಯನಾರಾಯಣ ರೆಡ್ಡಿಯವರು ಅನಾರೋಗ್ಯದ ಕಾರಣ ದಿನಾಂಕ: 19.6.06 ರಂದು ಬರೆದ ಪತ್ರವು ನನಗೆ ಬಂದಿದ್ದು, ಅದು ಈ ರೀತಿ ಇದೆ;

"ಶ್ರೀ ಎನ್. ಸೂರ್ಯನಾರಾಯಣ ರೆಡ್ಡಿಯವರು ಅನಾರೋಗ್ಯದ ಕಾರಣ ದಿನಾಂಕ: 19.6.06 ರಿಂದ 7.7.06 ರವರೆಗೆ ಗೈರು ಹಾಜರಾಗಲು ಅನುಮತಿ ಕೋರಿ ಪತ್ರ ಬರೆದಿರುತ್ತಾರೆ".

ಮಾನ್ಯ ಸದಸ್ಯರು ಗೈರು ಹಾಜರಾಗಲು ಸಭೆಯು ಸಮ್ಮತಿಸುತ್ತದೆಯೇ?

ಸಭೆಯು ಒಪ್ಪಿಗೆ ಸೂಚಿಸಿತು

ಅಧ್ಯಕ್ಷರು : ಮಾನ್ಯ ಸದಸ್ಯರ ಗೈರು ಹಾಜರಿಗೆ ಅನುಮತಿ ನೀಡಲಾಗಿದೆ.

6. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ : ಬಿ.ಎಂ.ಐ.ಸಿ. ಯೋಜನೆ ಕುರಿತು.

ಶ್ರೀ ಆರ್. ದಿನೇಶ್ ಗುಂಡೂರಾವ್ : ಸರ್ಕಾರಕ್ಕೆ ಈ ವಿಷಯದ ಬಗ್ಗೆ ಕಾಳಜಿ ಇಲ್ಲವೆಂದು ಈಗ ಗೊತ್ತಾಗುತ್ತದೆ. ಮಂತ್ರಿಗಳು ಯಾರೂ ಇಲ್ಲ. ಕೇವಲ ಪ್ರಚಾರಕ್ಕೋಸ್ಕರ ಮಾಡುತ್ತಾರೆ.